

ರಾಟೆಯಿಂದ ಕೊಡ ಇಳಿಬಿಡುತ್ತಿದ್ದ. ಅದು ಎಷ್ಟು ಜೋರಾಗಿ ಬಾವಿಯಲ್ಲಿ ಇಳಿಯುತ್ತಿತ್ತೆಂದರೆ ಅವನ ಕೈಯಲ್ಲಿರುವುದು ಹಗ್ಗವೊ ಅಥವಾ ಮಿಂಚಿನ ಸರಪಳಿಯೋ ಎನಿಸುತ್ತಿತ್ತು. ಸರ್ ಎಂದು ಕ್ಷಣ ಮಾತ್ರದಲ್ಲಿ ಅವನ ಕೈಯಿಂದ ಜಾರಿಹೋಗುತ್ತಿತ್ತು. ಕೊಡವನ್ನು ಇಳಿಬಿಡುವಾಗ ಅಥವಾ ತುಂಬಿದ ಕೊಡ ಜಗ್ಗುವಾಗ ಆತ ಆಡುತ್ತಿದ್ದ ಅನೇಕ ಆಟಗಳು ಸಹ ವಿಶಿಷ್ಟವಾಗಿರುತ್ತಿದ್ದವು. ನಾಗಪ್ಪ ಮೈ ಕುಣಿಸಿದಂತೆ ಅವನ ಕೊಡ ಕೂಡ ಮೈ ಕುಣಿಸುತ್ತ ಕೆಳಗೆ ಇಳಿಯುತ್ತಿತ್ತು. ಅದು ನೀರು ತುಂಬಿಕೊಂಡು ಮೇಲೆ ಬರುವಾಗ ಅದರ ವೈಯ್ಯಾರ ನೋಡಬೇಕು! ತಾವೆ ಬಳುಕಿದಂತೆ ಇದೆಯಲ್ಲ ಎಂದು ಕಟ್ಟೆಯ ಮೇಲೆ ಕೂಡಿರುವ ನೀರೆಯರು ಅಂದುಕೊಳ್ಳುತ್ತಿದ್ದರು. ತನ್ನ ಮನಸ್ಸಿನ ಭಾವನೆಗಳನ್ನೆ ಬಿಚ್ಚುತ್ತಿದ್ದಾನೋ ಎನ್ನುವಂತೆ ಹಗ್ಗ ಬಿಚ್ಚುವುದು ಮತ್ತು ಹರಿದು ಹೋಗುತ್ತಿರುವ ಮನಸ್ಸನ್ನು ಕಟ್ಟುತ್ತಿದ್ದಾನೋ ಎನ್ನುವಂತೆ ಕೊಡಕ್ಕೆ ಬಿಗಿಯಾಗಿ ಹಗ್ಗ ಕಟ್ಟುವುದು ಮಾಡುತ್ತಿದ್ದ.

ನಾಗಪ್ಪನ ಕೈಚಳಕಕ್ಕೆ ಮಾರುಹೋದವರು ಅನೇಕ. ಹುರಿಗಟ್ಟಿರುವ ತೋಳುಗಳಿಂದ ಆತ ತುಂಬಿದ ಕೊಡವನ್ನು ಎಳೆಯುವುದು, ಒಂದೇ ಕೈಯಿಂದ ಅದನ್ನು ಎತ್ತಿ ಹೆಗಲ ಮೇಲೆ ಇಟ್ಟುಕೊಳ್ಳುವುದು ಮಲ್ಲೂರಿನ ಒಂದು ಅವಿಸ್ಮರಣೀಯ ನೋಟವಾಗಿದ್ದಿತು. ಕೊಡ ಹೊತ್ತುಕೊಂಡು ನೀರಿಗೆಂದು ಬರುವ ಮುದುಕಮುದುಕಿಯರಿಗೆ ನಾಗಪ್ಪನೆ ನೀರು ಹಣಿಸುವ ಭಗೀರಥನಾಗಿದ್ದ. ಒಮ್ಮೊಮ್ಮೆ ತಾನೆ ಅವರ ಮನೆಗೆ ಹೋಗಿ ಹೆಗಲ ಮೇಲಿನ ಜೋಡುಗೊಡಗಳನ್ನು ಅವರ ಪಾತೇಲಿಗೋ, ಹಂಡೆಗೋ ಸುರುವಿ ಬರುತಿದ್ದ. ತುಂಬು ಬಸುರಿಯನ್ನು ನೀರಿಗೆ ಹೇಗಪ್ಪಾ ಕಳಿಸುವುದು ಎಂದು ಚಿಂತಿಸುವ ಅತ್ತೆಯರಿಗೆ ನಾಗಪ್ಪ ಕಂಡನೆಂದರೆ ಆ ಚಿಂತೆ ತಪ್ಪುತ್ತಿತ್ತು. ಇತ್ತೀಚೆಗೆ ಬಾವಿಯ ರಿಪೇರಿ ಕೆಲಸದಲ್ಲಿ ಮಾಯಕ್ಕ ನಿರತಳಾಗಿದ್ದಾಳೆ. ಅದನ್ನು ನಾಗಣ್ಣನೆ ನಿಂತು ಮಾಡಿಸುತ್ತಿದ್ದಾನೆ. ಕೆಲವರಿಗೆ ಮಾಯಕ್ಕಳ ಇಂತಹ ಕೆಲಸಗಳು ಜನಪ್ರಿಯತೆ ಗಳಿಸುವ ತಂತ್ರಗಳು ಎಂದು ಅನಿಸತೊಡಗಿದವು. ಆಕೆಯ ವಿರುದ್ಧ ಕರಪತ್ರಗಳನ್ನು ಹಂಚತೊಡಗಿದರು. ಅವುಗಳನ್ನು ಯಾರು ಮಾಡುತ್ತಾರೆನ್ನುವ ಒಂದು ಅಂದಾಜು ಆಕೆಗೆ ಸಿಕ್ಕುತ್ತಿತ್ತು. ಆದರೆ ಅದರ ಹಿಂದೆ ಬಿದ್ದು ತನ್ನ ಸಮಯವನ್ನು ವ್ಯರ್ಥ ಮಾಡಿಕೊಳ್ಳುವ ಮನಸ್ಸು ಅವಳಿಗಿರಲಿಲ್ಲ. ತನ್ನನ್ನು ಕಂಡು ಕರುಬುವವರು ಕರುಬಲಿ, ಹರಸುವವರು ಹರಸಲಿ. ಆಕೆ ರಾಜಾರೋಷವಾಗಿ ಹೇಳುತ್ತಿದ್ದಳು. ವಿರೋಧಿಗಳನ್ನು ಬಹಿರಂಗವಾಗಿಯೇ ಗೇಲಿ ಮಾಡುತ್ತಿದ್ದಳು. ಭಾಷಣ ಮಾಡುವುದನ್ನು, ನಗುವುದನ್ನು, ಅಂಕಿಅಂಶ ಹೇಳುವುದನ್ನು, ವ್ಯಂಗದ ಬಾಣ ಬಿಡುವುದನ್ನು ಮಾಯಕ್ಕನಿಗೆ ಯಾರು ಕಲಿಸಿಕೊಟ್ಟರೋ, ದೇವರೆ ಬಲ್ಲ!

ಅವಳಿಗೊದಗುವ ಪ್ರತಿ ಅವಕಾಶವನ್ನು ಆಕೆ ತನ್ನ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲಿಕ್ಕೆ ಉಪಯೋಗಿಸುವುದು ಬಹಳಷ್ಟು ಮಂದಿಗೆ ಗೊತ್ತಾಗುತ್ತಿತ್ತು. ಆದರೆ ಯಾರೂ ಏನೂ ಮಾಡುವಂತಿರಲಿಲ್ಲ. ಆಕೆಯ ಕಲೆ ಬಹುಶಃ ಯಾರಿಗೂ ಬರಲಿಕ್ಕಿಲ್ಲವೆಂಬಂತೆ ಕೆಲವೊಮ್ಮೆ ಅನ್ನಿಸುತ್ತಿತ್ತು. ಅವಳು ತನ್ನ ಬಗ್ಗೆ ಅತಿಯಾಗಿ ಹೇಳಿಕೊಳ್ಳುವುದು ಖರೆ ಇರಬಹುದು. ಆದರೆ ಮಾಯಕ್ಕ ಕೆಲಸಗಾರ್ತಿ ಎನ್ನುವುದನ್ನು ಅವಳ ಪಕ್ಕಾ ವೈರಿಯೂ ಒಪ್ಪುತ್ತಾನೆ. ಎಂತಹ ಅತಿವೃಷ್ಟಿ, ಅನಾವೃಷ್ಟಿಯಲ್ಲಿಯೂ ಆಕೆ ಕೆಲಸ ಮಾಡದೇ ಬಿಟ್ಟಿಲ್ಲ. ಇಷ್ಟೆಲ್ಲ ಕ್ರಿಯಾಶೀಲ ವ್ಯಕ್ತಿಯಾಗಿ ಆಕೆ ಹೇಗೆ ಬದಲಾದಳು! ಅಬ್ಬಾ, ಹೇಗಿದ್ದವಳು ಹೇಗಾದಳು! ಈ ಊರಿಗೆ ಪರದೇಶಿಯಾಗಿ ಬಂದವಳು ಈ ಊರನ್ನೇ ಆಳುವಂತಾದಳಲ್ಲ. ಮಾಯಕ್ಕ ಗೆಲ್ಲುವುದು ಸಾಧ್ಯವೇ ಇಲ್ಲ ಎನ್ನುವ ಪರಿಸ್ಥಿತಿಯನ್ನು ಆಕೆ ತನ್ನ ಪರವಾಗಿ ಒಲಿಸಿಕೊಂಡ ಪರಿಯನ್ನು ಯಾರಾದರೂ ಮೆಚ್ಚಲೇಬೇಕು. ಮಾಯಕ್ಕನಿಗೆ ಇರುವ ಪ್ರತಿಭೆ, ಸಾಮರ್ಥ್ಯ ಅವಳ ವಿರೋಧಿಗಳಿಗೆ ಬರಲು ಸಾಧ್ಯವೆ? ಜನರ ಮನಸ್ಸನ್ನು ತಿರುಗಿಸಲು ಅವಳಿಗಲ್ಲದೆ ಮತ್ಯಾರಿಗೆ ಸಾಧ್ಯ? ಒಂದು ಸಾಯಂಕಾಲ ನವೀಕರಣಗೊಂಡ ಬಾವಿಯ ಉದ್ಘಾಟನೆ ಇಟ್ಟುಕೊಂಡಳು. ಅವತ್ತು ಬೈಲಹೊಂಗಲದಿಂದ ಅನೇಕ ಗಣ್ಯ ವ್ಯಕ್ತಿಗಳು ಸಹ ಬಂದಿದ್ದರು. ಮಾಯಕ್ಕಳ ವರ್ಚಸ್ಸು ದಿನೆ ದಿನೇ ಹೆಚ್ಚಾಗುತ್ತ ಹೋಗುತ್ತಿದ್ದುದರ ನಿದರ್ಶನವಾಗಿತ್ತು ಆ ಸಭೆ. ಅಂದು ಅವಳು ಆಡಿದ ಮಾತುಗಳು ಪ್ರಮುಖ ಆಕರ್ಷಣೆಯಾಗಿದ್ದವು.

‘ನನ್ನ ಸ್ವಂತಕ್ಕ ನಾನು ಏನಾದರೂ ಮಾಡಿಕೊಂಡಿದ್ದೆ ಅಂದ್ರ ನನಗ ಉರಲ ಹಾಕ್ರಿ. ನಾ ರಾಜಕೀಯಕ್ಕೆ ಬಂದ ಉದ್ದೇಶ ಅಂದ್ರ ಈ ಊರನ್ನ ಸುಧಾರಣೆ ಮಾಡೋದು. ಸುಧಾರಣೆ ಅಂದ್ರ ನೂರಕ್ಕೆ ನೂರು ಅಲ್ಲ. ನನ್ನ ಕೈಯಿಂದ ಎಷ್ಟು ಆಕ್ಕೈತೋ ಅಷ್ಟು ಮಾತ್ರ. ಅಷ್ಟುಇಷ್ಟು ಅಂತ ಮೊದಲೆ ಹೇಳಿ ನಾನು ವಚನಭ್ರಷ್ಟೆ ಆಗಂಗಿಲ್ಲ. ನೂರಕ್ಕೆ ಐವತ್ತು ಪರ್ಸೆಂಟ್ ಆದ್ರೂ ನಮ್ಮೂರನ್ನ ಅಭಿವೃದ್ಧಿಪಡಿಸಬೇಕು ಅನ್ನೋ ಕನಸು ಐತಿ. ಹಿಂದಿನ ಅಧ್ಯಕ್ಷರುಗಳು ಊರ ಸಂಪತ್ತನ್ನ ಕೊಳ್ಳೆ ಹೊಡೆದರು. ಬರೀ ಕೊಳ್ಳೆ ಹೊಡೆಲಿಲ್ಲ, ಚೀಲ ತಗೊಂಡು ಬಳಕ್ಕೊಂಡ್ರು. ತಮ್ಮ ದೇಹದ ತೂಕದಷ್ಟು ಬಂಗಾರ ಮಾಡಿಸ್ಕೊಂಡ್ರು. ಹೆಂಗ ಬರ್ತೈತೋ ಹಂಗ ದೋಚಿದರು. ಈಗ ನಮ್ಮ ಹಳ್ಳಿ ಹೆಂಗೈತಿ ಅಂದ್ರ ಒಂದು ರೀತಿ ಚರ್ಮ ಸುಲಿದಿಟ್ಟ ಮನಸ್ಯಾನ ಅಸ್ಥಿಪಂಜರ ನೋಡಿದಂಗ